**SRUJANI**

ISSN: 2583-3510

**Indian Journal of Innovative Research and Development (SIJIRD)**

**Volume-1 (01), March-April 2022, Pp. 56-59**

**Bi-Monthly, Peer-Reviewed, Open Access, Indexed Journal**

srujanifoundation@gmail.com

editor@srujani.in

www.srujani.in

# ಮಹಿಳಾ ವಿಮೋಚನೆ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ದೃಷ್ಟಿಕೋನ: ಒಂದು ವಿಶ್ಲೇಷಣೆ

**ಡಾ. ನಾಗರಾಜು. ಎನ್***

*ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

***Abstract:***

ಅವಕಾಶ ವಂಚಿತ ಭಾರತೀಯ ಮಹಿಳೆಯರಿಗೆ ವಿದ್ಯೆ, ಆಸ್ತಿ ಮತ್ತು ಅಧಿಕಾರ ಮತ್ತು ಬಾಬಾಸಾಹೆಬ್ ಡಾ.ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಹೋರಾಟ ಮತ್ತು ಸಂವಿಧಾನದ ಮೂಲಕ ದೊರಕಿಸಿಕೊಟ್ಟಿದ್ದಾರೆ. ಅಂಬೇಡ್ಕರ್‌ರವರು ಕೇವಲ ದಲಿತ ಮಹಿಳೆಯರ ಹಕ್ಕು ಮತ್ತು ಘನತೆಗಾಗಿ ಹೋರಾಡಿದವರಲ್ಲ ಬದಲಿಗೆ ಸಮಸ್ತ ಭಾರತೀಯರ ಅಲಕ್ಷಿತ ಸಮುದಾಯದ ಜನರ ವಿಮೋಚನೆಗಾಗಿ ಕಾನೂನಾತ್ಮಕ ಹಕ್ಕುಗಳನ್ನು ಕಲ್ಪಿಸಿಕೊಟ್ಟ ಬಹುಜನರ ವಿಮೋಚಕರಾಗಿದ್ದಾರೆ. ಆದರೆ ಮನುವಾದಿಗಳು ಅಂಬೇಡ್ಕರರವರನ್ನು ಕೇವಲ ದಲಿತರ ನಾಯಕರನ್ನಾಗಿ ಬಿಂಬಿಸುವ ಪ್ರಯತ್ನವನ್ನು ಮೊದಲಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಆದರೆ ಅಂಬೇಡ್ಕರ್ ಕೇವಲ ದಲಿತರಿಗಷ್ಟೆ ಅಲ್ಲದೆ ಎಲ್ಲಾ ವರ್ಗದ ದಮನಿತರ ಮತ್ತು ಮಹಿಳೆಯರ ಹಕ್ಕುಗಳಿಗಾಗಿ, ಸಬಲೀಕರಣಕ್ಕಾಗಿ ಮತ್ತು ಲಿಂಗ ಸಮಾನತೆಗಾಗಿ ಹೋರಾಡಿದ್ದಾರೆ.

***Key Words*** ಅಂಬೇಡ್ಕರ್, ಮಹಿಳೆ, ವಿಮೋಚನೆ, ಹಿಂದೂ ಕೋಡ್ ಬಿಲ್.

**ಪೀಠಿಕೆ**

ಭಾರತದ ಭಾಗ್ಯವಿದಾತ, ಯುಗಪ್ರವರ್ತಕ, ಸಮಾನತೆಯ ಹರಿಕಾರ, ಆಧುನಿಕ ಭಾರತದ ಪಿತಾಮಹ ಡಾ.ಬಿ.ಆರ್ ಅಂಬೇಡ್ಕರ್‌ರವರು ವರ್ತಮಾನದಲ್ಲಿ ಅತೀ ಹೆಚ್ಚು ಚರ್ಚಿತರಾಗುತ್ತಿರುವ ಮತ್ತು ಪ್ರಚಲಿತವಾಗಿರುವ ಸಿದ್ಧಾಂತಿ. ಭಾರತದ ಸಂದರ್ಭದಲ್ಲಿ ಬಹುಜನ ಎಂದರೆ ಶೇ 25% ರಷ್ಟಿರುವ ಪರಿಶಿಷ್ಟ ಬುಡಕಟ್ಟು, ಪರಿಶಿಷ್ಟ ಜಾತಿ, ಶೇ 45% ರಷ್ಟಿರುವ ಒಬಿಸಿ ಮತ್ತು ಶೇ 15% ರಷ್ಟಿರುವ ಧಾರ್ಮಿಕ ಅಲ್ಪಸಂಖ್ಯಾತರು, ಒಟ್ಟು ಸೇರಿದರೆ ಶೇ.85% ರಷ್ಟಾಗುತ್ತಾರೆ, ಹೀಗೆ 85%ರಷ್ಟಿರುವ ಬಹುಜನರ ಹಿತ ರಕ್ಷಿಸಲು ಮತ್ತು ಸಾಮಾಜಿಕ, ರಾಜಕೀಯ ಮತ್ತು ಉದ್ಯೋಗ ಮೀಸಲಾತಿ ಮತ್ತು ಭದ್ರತೆ ಕಲ್ಪಿಸಿಲು ಸಂವಿಧಾನದಲ್ಲಿ ಅನುಚ್ಛೇದ 15(2), 16(4), 17, 340, 341, ಮತ್ತು 342ರಲ್ಲಿ ವಿಶೇಷ ಹಕ್ಕು ಮತ್ತು ರಕ್ಷಣೆ ಒದಗಿಸಿದ್ದಾರೆ.

ಬಹುಜನರಿಗೆ ಇಂತಹ ಹಕ್ಕುಗಳನ್ನು ಒದಗಿಸಲು ಅಂಬೇಡ್ಕರ್‌ರವರು ಹಲವು ರಾಜಕೀಯ ಹೋರಾಟ ಮತ್ತು ಸಂಘರ್ಷವನ್ನು ಹೂಡಬೇಕಾಯಿತು, ಏಕೆಂದರೆ 1946ರಲ್ಲಿ ಸಂವಿಧಾನ ರಚನಾಸಭೆಗೆ ನಡೆದ ಚುನಾವಣೆಯಲ್ಲಿ ಅಂಬೇಡ್ಕರ್‌ರವರು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಭ್ಯರ್ಥಿಯಾಗಿ ಬಾಂಬೆ ಪ್ರಾಂತ್ಯದಿಂದ ಸ್ಪರ್ಧಿಸಿದಾಗ ಕಾಂಗ್ರೆಸನ ಆರ್.ಎಂ ಜೈಕರ್ ವಿರುದ್ಧ ಸೋಲಬೇಕಾಯಿತು. ಆದರೆ, ಶೋಷಿತರ ಹಿತರಕ್ಷಿಸಲು ಸಂವಿಧಾನ ರಚನಾಸಭೆಗೆ ಪ್ರವೇಶ ಮಾಡಬೇಕೇಂಬ ಅವರ ಪ್ರಯತ್ನ ಮತ್ತು ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರವರ ಮಹತ್ವವನ್ನು ಅರಿತ ಬಾಂಗ್ಲಾ ಪ್ರಾಂತ್ಯದಿಂದ ಆಯ್ಕೆಯಾದ ಮುಸ್ಲಿಂಲೀಗ್‌ನ ದಲಿತ ನಾಯಕ ಜೋಗಿಂದರ್‌ನಾಥ್ ಮಂಡಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಅಂಬೇಡ್ಕರ್ ಅವರ ಸ್ಪರ್ಧೆಗೆ ಅನುವುಮಾಡಿಕೊಟ್ಟು, ಚುನಾವಣೆಯಲ್ಲಿ ಆರಿಸಿ ಕಳುಯಿಸಿದರು. ಆದರೆ ಮುಂದೆ 1947ರಲ್ಲಿ ಭಾರತ–ಪಾಕಿಸ್ತಾನ ವಿಭಜನೆಯಾದಾಗ ಅಂಬೇಡ್ಕರ್‌ರವರು ಪ್ರತಿನಿಧಿಸುವ ಕ್ಷೇತ್ರ ಪಾಕಿಸ್ತಾನಕ್ಕೆ ಹಂಚಿಕೆಯಾದ ಕಾರಣ ಅಂಬೇಡ್ಕರ್ ತಮ್ಮ ಸ್ಥಾನ ಕಳೆದುಕೊಂಡರು. ರಾಷ್ಟ್ರ ವಿಭಜನೆ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವಕವಾಗಿ ಕಾಂಗ್ರೆಸ್ ಮತ್ತು ಮನುವಾದಿಗಳು ಅಂಬೇಡ್ಕರ್‌ರವರ ಕ್ಷೇತ್ರವನ್ನು ಪಾಕಿಸ್ತಾನಕ್ಕೆ ಹಂಚಿದರು ಆದರೆ, ಅಂಬೇಡ್ಕರ್ ತಮ್ಮ ಪಟ್ಟು ಬಿಡದೆ ಬ್ರಿಟಿಷ್ ಸರ್ಕಾರದ ಮೇಲೆ

ಒತ್ತಡ ಹಾಕಿ ಸಂವಿಧಾನ ರಚನಾ ಸಭೆಯಲ್ಲಿ ತಮ್ಮ ಪಾತ್ರದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟ ನಂತರ ಬ್ರಿಟಿಷ್ ಸರ್ಕಾರ ಭಾರತೀಯ ಕಾಂಗ್ರೆಸ್ ನಾಯಕರಿಗೆ ಸಲಹೆ ನೀಡಿ ಅಂಬೇಡ್ಕರ ಅವರಿಗೆ ಸಂವಿಧಾನ ರಚನಾಸಭೆಯಲ್ಲಿ ಪ್ರಾತಿನಿಧ್ಯ ಕಲ್ಪಿಸಬೇಕು ಒಂದು ವೇಳೆ ನಮ್ಮ ಸಲಹೆಯನ್ನು ತಿರಸ್ಕರಿಸಿದರೆ ಭಾರತಕ್ಕೆ ಸ್ವಾತಂತ್ರ್ಯದ ಹಸ್ತಾಂತರವನ್ನು ಮುಂದೂಡುವುದಾಗಿ ಎಚ್ಚರಿಸಿದರ ಪರಿಣಾಮವಾಗಿ ಕಾಂಗ್ರೆಸ್ 1946ರಲ್ಲಿ ಬಾಂಬೆ ಪ್ರಾಂತ್ಯದಿಂದ ಅಂಬೇಡ್ಕರ ಅವರ ವಿರುದ್ಧ ಜಯಗಳಿಸಿದ ಆರ್.ಎಂ.ಜೈಕರ್ ಅವರ ಸ್ಥಾನಕ್ಕೆ ರಾಜಿನಾಮೆ ಕೊಡಿಸಿ ಅಂಬೇಡ್ಕರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಂಬೇಡ್ಕರ್‌ರವರ ಸಂವಿಧಾನ ರಚನಾಸಭೆಯ ಪ್ರವೇಶವೇ ಒಂದು ರೋಚಕ ಸಂಗತಿ ಆದ್ದರಿಂದ, ತಾವು ಎಷ್ಟೇ ಕಷ್ಟಪಟ್ಟರೂ ಅವರ ಮಹತ್ವದ ಉದ್ದೇಶ ಶೋಷಿತರು, ಹಿಂದುಳಿದವರು ಮತ್ತು ಮಹಿಳೆಯರ ಹಿತರಕ್ಷಣೆಯೇ ಮುಖ್ಯವಾಗಿತ್ತು. ಕಾಂಗ್ರೆಸ್‌ನ ಚಿತಾವಣೆಯಿಂದಾಗಿ ಅಂಬೇಡ್ಕರ್‌ರವರು ಸಂವಿಧಾನ ರಚನಾಸಭೆಗೆ ಆಯ್ಕೆಯಾಗದಿದ್ದರೆ ಇಂದಿನ ಬಹುಜನರ ಸ್ಥಿತಿ ಊಹಿಸಲು ಅಸಾಧ್ಯವೇ ಸರಿ.

ಇತ್ತೀಚೆಗೆ ಸ್ವರವಾನ್ವಿ ಎಂಬ ಯುವತಿ ಅಂಬೇಡ್ಕರವರಿಗೆ ಗೌರವ ಸಮರ್ಪಿಸುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿತ್ತು. ಸ್ವರವಾನ್ವಿಯಂತಹ ದೃಶ್ಯಗಳ ಜನಪ್ರಿಯತೆಯಿಂದಾಗಿ ಮಹಿಳಾ ವಿಮೋಚನೆಗಾಗಿ ನಡೆಸಿದ ಹೋರಾಟ ಮತ್ತು ಕೊಡುಗೆ ಕುರಿತಂತೆ ಅಂಬೇಡ್ಕರ್ ಕೇಂದ್ರಿತ ವಿಶಿಷ್ಟ ಸಾಂಸ್ಕೃತಿಕ ಚಿಂತನೆ ರೂಪಗೊಂಡಿದೆ. ಮಹಿಳಾ ವಿಮೋಚನೆಗಾಗಿ ಪಟ್ಟ ಶ್ರಮ ಮತ್ತು ಸಂಘರ್ಷವನ್ನು ಅರಿತ ದಲಿತ ಮತ್ತು ಬಹುಜನ ಸಮಾಜದ ಮಹಿಳೆಯರು ಅಂಬೇಡ್ಕರವರಿಗೆ ಸಾಂಸ್ಕೃತಿಕ ಗೌರವವನ್ನು ಅರ್ಪಿಸುತ್ತಿದ್ದಾರೆ. ಅಗ್ರಗಣ್ಯ ರಾಷ್ಟ್ರದ ನಿರ್ಮಾತೃ ಆದ ಡಾ.ಬಿ.ಆರ್. ಅಂಬೇಡ್ಕರ ಅವರು ರಾಷ್ಟ್ರದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರು ಪ್ರಮುಖ ಭಾಗವಾಗಿದ್ದು, "ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಆ ರಾಷ್ಟ್ರದ ಮಹಿಳೆಯರ ಪ್ರಗತಿಯನ್ನು ಆಧರಿಸಿ ಅಳೆಯುತ್ತೇನೆಂದು" ಅಂಬೇಡ್ಕರ್ ಜುಲೈ, 1942 ರಲ್ಲಿ ನಾಗಾಪುರದಲ್ಲಿ ಹಮ್ಮಿಕೊಂಡಿದ್ದ ಅಖಿಲ ಭಾರತದ ನಿಮ್ನ ವರ್ಗದ ಮಹಿಳಾ ಸಮ್ಮೇಳನದಲ್ಲಿ ಉಲ್ಲೇಖಿಸಿದ್ದರು. ಮಹಿಳಾ ವಿಮೋಚನೆ ಬಗ್ಗೆ ಉದಾರವಾದಿ ಪ್ರಗತಿಪರ ದೃಷ್ಟಿಕೋನ ಹೊಂದಿದ್ದ ಅಂಬೇಡ್ಕರವರು ಆಧುನಿಕ ಸಂವಿಧಾನದ ಚೌಕಟ್ಟಿನಲ್ಲಿ ಸಾಮಾಜಿಕ ನ್ಯಾಯವನ್ನು ಕಲ್ಪಿಸಿ ಮಹಿಳೆಯರ ಪ್ರಗತಿ ಸಾಧ್ಯವೆಂದು ನಂಬಿದ್ದರು. ಅಂಬೇಡ್ಕರ್ ಮಹಿಳೆಯರ ಸಮಾನತೆ ಮತ್ತು ಘನತೆ ಸಮನತೆಯ ಹಕ್ಕನ್ನು ಉತ್ತೇಜಿಸಲು ಸ್ಫೂರ್ತಿದಾಯಕವಾದ ಸಂವಿಧನಾತ್ಮಕ ಭರವಸೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಹಿಂದು ಕೋಡ್ ಬಿಲ್ ಮತ್ತು ಬೌದ್ಧ ಧರ್ಮಕ್ಕೆ ಮತ ಪರಿವರ್ತನೆ ಅಂಬೇಡ್ಕರ್ ಅವರ ಮಹತ್ವದ ನಿರ್ಧಾರವಾಗಿದೆ. ಆದರೆ, ಕೆಲ ಮಹಿಳಾವಾದಿಗಳು ಹಿಂದೂ ಕೋಡ್ ಬಿಲ್ 'ರಾಜಕೀಯ ಪ್ರೇರಿತ' ಎಂದಿದ್ದು, ಅಂಬೇಡ್ಕರವರನ್ನು ಮಹಿಳ ಪರ ಚಿಂತಕ ಎಂದು ಒಪ್ಪಿಕೊಳ್ಳಲು ಸವರ್ಣ ಸಮುದಾಯಕ್ಕೆ ಸೇರಿದ ಮಹಿಳೆಯರು ಪಕ್ಷಪಾತ ಧೋರಣೆ ವ್ಯಕ್ತಪಡಿಸಿದ್ದಾರೆ. ಭಾರತದ ಸಮಾಜಶಾಸ್ತ್ರಜ್ಞೆ ಮತ್ತು ಸಂಶೋಧಕಿ ಶರ್ಮಿಳಾ ರೆಗೆ ಅವರು ಅಂಬೇಡ್ಕರ ಅವರ ಚಿಂತನೆಯು ಮಹಿಳ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಆಧುನಿಕ ಭಾರತವು ಪುನರ್ ಆಲೋಚಿಸುವಂತೆ ಮಾರ್ಗದರ್ಶನ ಮಾಡಿದೆ ಹಾಗು ಮಹಿಳೆಯರಿಗೆ ವಿಶೇಷವಾಗಿ ಧಮನಿತ ಮಹಿಳೆಯರು ಧ್ವನಿ ಎತ್ತುವಂತೆ ಸಾಮರ್ಥ್ಯಗೊಳಿಸಲು ಬಯಸಿದರು ಎಂದು ರೇಗೆ ತಿಳಿಸಿದ್ದಾರೆ. ಅಂಬೇಡ್ಕರ ಅವರು ಲೌಕಿಕವಾದಿಯಾಗಿದ್ದು, ಮಹಿಳೆಯರನ್ನು ನೈಜವಾಗಿ ವೈಚಾರಿಕವಾಗಿ, ಮತ್ತು ಪ್ರಾಯೋಗಿಕವಾಗಿ ವಿಮೋಚನೆಗೊಳಿಸುವ ಮೂಲಕ ಮಹಿಳೆಯರಿಗೆ ಐತಿಹಾಸಿಕವಾಗಿ ನಿರಾಕರಿಸಲ್ಪಟ್ಟ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಕಾರ್ಯನಿರ್ವಹಿಸಲು ಸಂವಿಧಾನಿಕ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

**ಹಿಂದೂ ಮಹಿಳೆಯರ ವಿಮೋಚನೆ**

ಮಹಿಳೆಯರ ವಿಮೋಚನೆಗೆ ಅಂಬೇಡ್ಕರ್ ನೀಡಿರುವ ಕೊಡುಗೆಯು ಅವರ ಬರಹ ಮತ್ತು ಭಾಷಣಗಳಾದ Revolution and counter Revolution in ancient India ಮತ್ತು riddles in Hinduism ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬಿಂಬಿತವಾಗಿದೆ. ಸಾಮಾಜಿಕ ನ್ಯಾಯವು ಇವರ ಬರಹದ ಕೇಂದ್ರಬಿಂದುವಾಗಿದ್ದು, ಇವರ ಭಾಷಣವು ಆಳವಾಗಿ ಬೇರೂರಿರುವ ದಲಿತ ಮತ್ತು ಇತರೆ ದಮನಿತ ವರ್ಗದ ಮಹಿಳೆಯರ ಹಕ್ಕುಗಳನ್ನು ಕುರಿತಾಗಿದೆ, ದಲಿತ ಮತ್ತು ದಮನಿತ ವರ್ಗದ ಮಹಿಳೆಯರು ಸಾಮಾಜಿಕ ವ್ಯವಸ್ಥೆಯಲ್ಲಿ ಕಡೆಗಣಿಸಲ್ಪಟ್ಟಿದ್ದಾರೆ.

ಮನುಧರ್ಮಶಾಸ್ತ್ರವು ಮಹಿಳೆಯರನ್ನು ಭೋಗದ ವಸ್ತು ಎಂದು ಪರಿಗಣಿಸಿ ಅವರಿಗೆ ಶಿಕ್ಷಣವನ್ನು ನಿರಾಕರಿಸಿದೆ ಎಂದು ಅಂಬೇಡ್ಕರ್ ತಮ್ಮ The rise of fall of Hindu women ಕೃತಿಯಲ್ಲಿ ತಿಳಿಸಿದ್ದಾರೆ. ಮನುಸ್ಮೃತಿಯ (9.18) ಪ್ರಕಾರ "ಮಹಿಳೆಯರು ವೇದ ಅಧ್ಯಯನ ಮಾಡುವಂತಿಲ್ಲ ಹಾಗೂ ಮಹಿಳೆಯರ ಶವ ಸಂಸ್ಕಾರದಲ್ಲಿ ವೇದ ಮಂತ್ರಗಳನ್ನು ಹೇಳುವಂತಿಲ್ಲ ಹಾಗೂ ಮಹಿಳೆಯರಿಗೆ ಧಾರ್ಮಿಕ ಜ್ಞಾನ ಇರುವುದಿಲ್ಲ ಏಕೆಂದರೆ ಅವರು ವೇದ ಅಧ್ಯಯನ ಮಾಡುವ ಹಕ್ಕು ಹೊಂದಿಲ್ಲ ಆದರೆ, ಹಿಂದು ಧರ್ಮದ ಪ್ರಕಾರ ಪಾಪ ಕಳೆಯಲು ವೇದ-ಮಂತ್ರ ಹೇಳುವುದು ಮುಖ್ಯವಾಗಿದೆ. ಮನುಸ್ಮೃತಿ ಪ್ರಕಾರ ಮಹಿಳೆಯರು ಧರ್ಮದಿಂದ ನಿರಾಕರಿಸಲ್ಪಟ್ಟವರಾಗಿದ್ದು ಅವರು ಅಸತ್ಯವಾದಿಗಳಾಗಿದ್ದಾರೆಂದು ಧರ್ಮದಲ್ಲಿ ಬಿಂಬಿಸಲಾಗಿದೆ." (ಬಾಬಾ ಸಾಹೇಬ್ ಅಂಬೇಡ್ಕರ ಅವರ ಬರಹ ಮತ್ತು ಭಾಷಣಗಳು ಸಂಪುಟ-17(2), ಪು.ಸಂ. 119)

ಅಂಬೇಡ್ಕರ್‌ರವರ ಪ್ರಕಾರ ಮನುಧರ್ಮಶಾಸ್ತ್ರದ ಜಾರಿಗೂ ಮುಂಚೆ ಮಹಿಳೆಯರು ಸಮಾಜದಲ್ಲಿ ಗೌರವಯುತ ಸ್ಥಾನ

ಹೊಂದಿದ್ದರು. ಮಹಿಳೆಯರು ಅಥರ್ವವೇದ ಮತ್ತು ಶ್ರೌತ ಸೂತ್ರದಲ್ಲಿ ತಿಳಿಸಿರುವಂತೆ ಶಿಕ್ಷಣ ಪ್ರವೇಶ ಹೊಂದಿದ್ದರು. (ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳು ಸಂಪುಟ–17(2) ಪುಟ ಸಂಖ್ಯೆ 122). ಪ್ರಾಚೀನ ಭಾರತದ ಪ್ರಮುಖ ಮಹಿಳೆಯರಾದ ರಿಸಿಗರ್ಗಿ, ವಿದ್ಯಾಧರಿ ಮತ್ತು ಸುಲಭ ಮೈತ್ರಿಯೆಯಂತಹ ಪ್ರಸಿದ್ಧ ಮಹಿಳಾ ಬುದ್ಧಿಜೀವಿಗಳು ಇದ್ದಾರೆಂದು ಮನುವಿನ ಪೂರ್ವದ ಸಾಹಿತ್ಯಗಳು ಉಲ್ಲೇಖಿಸುತ್ತವೆ.

ಅಂಬೇಡ್ಕರ್‌ರವರು ಮನುಧರ್ಮಶಾಸ್ತ್ರವನ್ನು ಸುಳ್ಳಿನ ಕಂತೆ ಎಂದು ಟೀಕಿಸಿದ್ದು, ಮಹಿಳೆಯರು ಶಿಕ್ಷಣ ಪಡೆಯಲು ಪ್ರೋತ್ಸಾಹದ ಸ್ಫೂರ್ತಿಯಾಗಿದ್ದಾರೆ. ಸಿನ್ಸಿನಾಟಿ ವಿಶ್ವವಿದ್ಯಾನಿಲಯದ, ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶೈಲಜ ಫೈಕ್ ತಮ್ಮ ಅಂಬೇಡ್ಕರ್ ಮತ್ತು ಮಹಿಳೆಯರ ಶಿಕ್ಷಣದ ಕುರಿತ ಬದ್ದತೆ ಚರ್ಚೆಯಲ್ಲಿ ಮಹಿಳೆಯರ ಸುಧಾರಣೆ ಮತ್ತು ಸ್ವಾವಲಂಬನೆ ಶಿಕ್ಷಣ ಪಡೆದ ಬುದ್ಧಿಜೀವಿಗಳಿಂದ ಮಾತ್ರ ಸಾಧ್ಯ ಎಂದು ಬಾಬಾ ಸಾಹೇಬರು ಹೇಳಿದ್ದಾರೆ ಎಂದು ತಿಳಿಸಿದ್ದಾರೆ. ಅಂಬೇಡ್ಕರ್‌ರವರು ತಮ್ಮ ಪ್ರಕಟಣೆ ಪತ್ರಿಕೆಯಾದ ಬಹಿಷ್ಕೃತ ಭಾರತದ ಫೆಬ್ರವರಿ 3,1928 ರ ಸಂಚಿಕೆಯಲ್ಲಿ "ಜ್ಞಾನ ಮತ್ತು ಕಲಿಕೆ ಕೇವಲ ಪುರುಷರಿಗೆ ಮಾತ್ರವಲ್ಲದೆ ಮಹಿಳೆಯರಿಗೆ ಅತ್ಯಾವಶ್ಯಕವಾಗಿದೆ ಎಂದು ಬರೆದಿದ್ದಾರೆ, ನಿಮ್ಮ ಮುಂದಿನ ಪೀಳಿಗೆ ಸುಧಾರಿಸಬೇಕಾದರೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಅತೀ ಮುಖ್ಯವಾಗಿದೆ. ಆದ್ದರಿಂದ ನೀವು ನನ್ನ ಮಾತನ್ನು ಮರೆಯುವಂತಿಲ್ಲ ಅಥವ ಅನುಸರಿಸದೆ ವಿಮುಖರಾಗುವಂತಿಲ್ಲ".

1953ರಲ್ಲಿ ಮಹಿಳಾ ಹಕ್ಕುಗಳಿಗೆ ಸಂಬಂಧಿಸಿದ ಹಿಂದೂ ಕೋಡ್ ಬಿಲ್ ಮಂಡನೆಗಾಗಿ ಪ್ರಯತ್ನಿಸಿದರು. ಆದರೆ ಮಸೂದೆ ಅಂಗೀಕಾರವಾಗದ ಕಾರಣ ತಮ್ಮ ಕಾನೂನು ಮಂತ್ರಿ ಪದವಿಗೆ ರಾಜಿನಾಮೆ ಸಲ್ಲಿಸಿ ಸರ್ಕಾರದಿಂದ ಹೊರಬಂದರು. ಅಂಬೇಡ್ಕರವರ ಅಪೇಕ್ಷೆಯಂತೆ ಹಿಂದೂ ಕೋಡ್‌ಬಿಲ್ ಅಂಗೀಕಾರವಾಗಿದ್ದರೆ ಮನುಧರ್ಮಶಾಸ್ತ್ರ ನಿರಾಕರಿಸಲ್ಪಟ್ಟ ಆಸ್ತಿ ಹಕ್ಕನ್ನು ಮಹಿಳೆಯರಿಗೆ ದೊರಕಿಸಿಕೊಟ್ಟಂತಾಗುತ್ತದೆಂಬ ಅಪಾರ ವಿಶ್ವಾಸವಿತ್ತು, ಈ ಕಾಯ್ದೆಯ ಪ್ರಕಾರ ಮಹಿಳೆಯರು ಸಾಂಪ್ರದಾಯಿಕ ಸ್ತ್ರೀದಾನದ ಮೂಲಕ ಆಸ್ತಿ ಒಡೆತನ ಹೊಂದಬಹುದಿತ್ತು ಆದರೆ, ಹಿಂದೂ ಉತ್ತರಾಧಿಕಾರದ ಕಾಯ್ದೆ 1956 ಸೆಷನ್ 14ರ ಪ್ರಕಾರ ಮಹಿಳೆಯರು ತಮ್ಮ ಅಂತರ್ ಸಂಬಂಧದಲ್ಲಿ ವಿವಾಹವಾದರೆ ಮಾತ್ರ ಆಸ್ತಿ ಲಭಿಸುತ್ತದೆ ಎಂಬ ಕಾಯ್ದೆಯ ಸೆಕ್ಷನ್ 6 ಕುಟುಂಬದ ಪುರುಷ ಸದಸ್ಯರ ಆಸ್ತಿಯ ವಿಶೇಷ ಉತ್ತರಾಧಿಕಾರವನ್ನು ವಿಸರ್ಜಿಸಿತು ಹಾಗೂ ಹಿಂದೂ ಮಹಿಳೆಯರಿಗೂ ಹಕ್ಕನ್ನು ವಿಸ್ತರಿಸಿತು. ಹಿಂದೂ ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ನೀಡಿ, ಮಹಿಳೆಯರು ಸಂಪತ್ತಿನಮೇಲೆ ನಿಯಂತ್ರಣ ಹೊಂದಿ ತಮ್ಮದೆಯಾದ ಸಂಸ್ಥೆ ಸ್ಥಾಪಿಸಿಕೊಳ್ಳುವಂತಾಗಬೇಕೆಂದು ಅಂಬೇಡ್ಕರ್‌ರವರು ಬಯಸಿದರು. ಆದ್ದರಿಂದ ಮಹಿಳಾ ವಿಮೋಚನೆ ಬಗೆಗಿನ ಇವರ ದೃಷ್ಟಿಕೋನ ಕೇವಲ ಸೈದ್ಧಾಂತಿಕವಾಗಿರದೆ, ನೈಜದೃಷ್ಟಿಕೋನವಾಗಿದ್ದು ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ಸಮಾನ ಅಧಿಕಾರ ಹೊಂದುವ ಭರವಸೆಯ ತತ್ವವಾಗಿದೆ.

**ಸಮಕಾಲೀನ ಸಾಂಸ್ಕೃತಿಕ ಆಚರಣೆ**

ಅಂಬೇಡ್ಕರ್ ಅವರು ಅಲಕ್ಷಿತ ಸಮುದಾಯದ ಮಹಿಳೆಯರಲ್ಲಿ ಸಾಮಾಜಿಕ ಬದಲಾವಣೆ ತರುವ ಸಂಕೇತವಾಗಿದ್ದು, ದಲಿತ ಮತ್ತು ಬಹುಜನ ಮಹಿಳೆಯರು ಅಂಬೇಡ್ಕರ್ ಕೇಂದ್ರಿತವಾದ ಸಾಂಸ್ಕೃತಿಕ ಹಾಡು, ಸಾಹಿತ್ಯ ಮತ್ತು ಭಾವಚಿತ್ರ ರಚಿಸುವ ಮೂಲಕ ಅಂಬೇಡ್ಕರ ಅವರನ್ನು ತಮ್ಮ ವಿಮೋಚಕರನ್ನಾಗಿ ಸ್ವೀಕರಿಸಿದ್ದಾರೆ. ಆಧುನಿಕ ರಾಷ್ಟ್ರದ ನಿರ್ಮಾಣದ ರೂವಾರಿಯಾದ ಅಂಬೇಡ್ಕರ್‌ರವರನ್ನು ಕೇವಲ ಒಂದು ವರ್ಗದ ನಾಯಕರನ್ನಾಗಿ ಸೀಮಿತಗೊಳಿಸುವ ಪ್ರಯತ್ನ ವಿಫಲವಾಗಿದೆ. ಯುವಪೀಳಿಗೆ ಅಂಬೇಡ್ಕರವರನ್ನು ತಮ್ಮ ಮನಸ್ಸಿನೊಳಗೆ ಸ್ಥಾಯಿಕರಿಸಿದ್ದಾರೆ. ಭಾರತದ ಸಂವಿಧಾನದ ಪ್ರಧಾನ ಶಿಲ್ಪಿಯಾದ ಅಂಬೇಡ್ಕರ್‌ರವರು ನಾಗರಿಕರ ಹಕ್ಕು ಮತ್ತು ನ್ಯಾಯದ ಪರಿಕಲ್ಪನೆಯಲ್ಲಿ ಹೊಸ ದೃಷ್ಟಿಕೋನ ಹೊಂದಿದ್ದರು. ವಿಶೇಷವಾಗಿ ನಿರ್ಲಕ್ಷಿತ ಮಹಿಳೆಯರ ಬಗ್ಗೆ ವಿಶೇಷ ಆಸಕ್ತಿ ವ್ಯಕ್ತಪಡಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 131 ನೇ ಜಯಂತಿಯ ಅಂಗವಾಗಿ ರಾಷ್ಟ್ರದಾದ್ಯಂತ ಹಲವು ಸಂಸ್ಕೃತಿಕ ಆಚರಣೆಗಳು ನಡೆಯುತ್ತಿದ್ದು, ಭಾರತದ ಅಭಿವೃದ್ಧಿ ಮಹಿಳಾ ಕೇಂದ್ರಿತ ಅಭಿವೃದ್ಧಿಯನ್ನಾಗಿಸಲು ಅಂಬೇಡ್ಕರ್ ನಡೆಸಿದ ಹೋರಾಟವನ್ನು ಪ್ರತಿಯೊಬ್ಬ ಭಾರತೀಯ ಈ ಸಂಧರ್ಭದಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ. ವೈದಿಕ ಸಮಾಜದ ಅಧಿಕಾರ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಾನ–ಮಾನ ಅತ್ಯಂತ ಕೆಳಸ್ತರದಲ್ಲಿದ್ದು ಇಂತಹ ಸ್ಥಿತಿಯಲ್ಲಿದ್ದ ಮಹಿಳೆಯರಿಗೆ ಉನ್ನತ ಸ್ಥಾನ–ಮಾನ ಕಲ್ಪಿಸಿ ಸಾಮಾಜಿಕ ಮತ್ತು ಕಾನೂನಾತ್ಮಕ ಚೌಕಟ್ಟಿನಲ್ಲಿ ರಕ್ಷಣೆ ನೀಡಿದ್ದಾರೆ ಹಾಗೂ ಅಂಬೇಡ್ಕರ್‌ರವರು ಈ ಸಂದರ್ಭದಲ್ಲಿ ಸಮಾಜದೊಂದಿಗೆ ದೀರ್ಘ ಸಂಘರ್ಷವನ್ನು ಹೂಡಬೇಕಾಯಿತು. ಡಾ.ಬಿ.ಆರ್. ಅಂಬೇಡ್ಕರ್ ಪರಿಶ್ರಮದಿಂದ ಹಲವು ದಲಿತ ಮತ್ತು ಶೋಷಿತ ವರ್ಗದ ಮಹಿಳೆಯರು ಮಾತ್ರವಲ್ಲದೆ ಮೇಲ್ವರ್ಗದ ಮಹಿಳೆಯರೂ ಕೂಡ ಸಾಮಾಜಿಕ ಚೌಕಟ್ಟಿನಿಂದ ಹೊರಬಂದು ತಮ್ಮ ಮೇಲಾಗುತ್ತಿರುವ ಅನ್ಯಾಯ ಮತ್ತು ಅಪಮಾನದ ಬಗ್ಗೆ ಸವರ್ಣೀಯರ ವಿರುದ್ಧ ಮಾತನಾಡಲು ಪ್ರಾರಂಭಿಸಿದ್ದಾರೆ ಹಾಗೂ ಹಲವು ಜಾತಿ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿ ತಮ್ಮ ಸಾಮಾಜಿಕ ಮತ್ತು ರಾಜಕೀಯ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಪ್ರಖ್ಯಾತ ಬರಹಗಾರ್ತಿಯಾದ ಊರ್ಮಿಳ ಪಾವರ್ ಮತ್ತು ಮೀನಾಕ್ಷಿ ಮೂನ್ ಅಭಿಪ್ರಾಯಪಟ್ಟಿರುವಂತೆ ದಲಿತ ಸಮುದಾಯದ ಮಹಿಳೆಯರು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ತಮ್ಮ ಐಕ್ಯತೆಯನ್ನು ವ್ಯಕ್ತಪಡಿಸಿದ್ದಾರೆ. ಹಾಗೂ ಇವತ್ತಿನ ಎಲ್ಲಾ ಮಹಿಳಾಪರ ಸಂಘಟನೆ ಮತ್ತು ಹೋರಾಟಗಾರ್ತಿಯರು ಅಂಬೇಡ್ಕರ್

ಚಿಂತನೆಯಿಂದ ಸ್ಫೂರ್ತಿ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಬಾ ಸಾಹೇಬ್‌ರ ಸ್ತ್ರೀವಾದಿ ದೃಷ್ಟಿಕೋನವನ್ನು ನಾವು ಒಪ್ಪಿಕೊಂಡಾಗ ಮಾತ್ರ ಅವರಿಗೆ ನೈಜವಾದ ಗೌರವವನ್ನು ಅರ್ಪಿಸಿದಂತಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- Ambedkar, B. R. (2013). *Dr. Babasaheb Ambedkar Writings and Speeches Vol. 14 (Part One): Dr. Ambedkar and the Hindu Code Bill. L General Discussion on the Draft (17th November1947 to 14th December 1950)*. Dr. Ambedkar Foundation, Ministry of Social Justice and Empowerment, Government of India.
- Ambedkar, B. R. (2019). *Riddle In Hinduism*. Independently published.
- Bhale rao, V. (2020). *Dr. Babaaheb Ambedkar and women Upliftment*. Ashok Yakkaldevi.
- Government of India. (2017). *The Constitution Of India*. Government of India.
- Swamy, K. (2011). *Hindu Code Bill Samiksha-Part-1 (Telugu Edition)*. Nabu Press.